ಅಲ್ಲಿ ಒಬ್ಬ ವೃದ್ಧ ಮತ್ತವನ ಪಕ್ಕ ಓರ್ವ ವೃದ್ಧೆಯ ಚಿತ್ರಗಳು ಪ್ರಕಟವಾದವು. ಇವರೂ ಕೂಡ ಏನೋ ಹೇಳಲಿದ್ದಾರೆ ಎಂಬುದು ಅವರಿಗೆ ಸ್ಪಷ್ಟವಾಯಿತು.

‘ನೋಡ್ರಪ್ಪ, ನಾವೇನು ಇವರೆಲ್ಲರಿಗಿಂತ ಶತಮಾನಗಳಷ್ಟು ಹಳೆಯವರಲ್ಲ. ನಾವು ನಮ್ಮ ಅರವತ್ತನೇ ವರ್ಷದ ಮದುವೆ ವಾರ್ಷಿಕೋತ್ಸವ ಆಚರಿಸಿಕೊಂಡು ಎಂಬತ್ತೈದರ ಆಸುಪಾಸಿನಲ್ಲಿ ಸತ್ತೋದ್ವಿ. ಕೂಡು ಕುಟುಂಬದಲ್ಲಿದ್ದರೂ ಇದುವರೆಗೆ ಇವ್ರು ಹೇಳಿದ ಯಾವ ರೀತಿಯ ತೊಂದರೆಗಳೂ ನಮ್ಮನ್ನ ಬಾಧಿಸಲಿಲ್ಲ. ಹಾಗಂತ ನಮ್ಮದೇನೂ ಜಗಳವೇ ಇಲ್ಲದ ದಾಂಪತ್ಯ ಅಂತೇನಿಲ್ಲ. ನಾವೂ ಜಗಳ ಆಡ್ತಿದ್ವಿ. ಆದ್ರೆ ಮದುವೆ ಮುರಿಯೋ ತನಕ ಆ ಯಾವ ಜಗಳಗಳು ಹೋಗ್ತಿರ್ಲಿಲ್ಲ. ಹಾಗೆ ನೋಡಿದ್ರೆ, ಇವಳ ಆಸೆಗಳಲ್ಲಿ ನಾನು ಹೆಚ್ಚಿನವನ್ನ ಈಡೇರಿಸಿಲ್ಲ ಅನ್ನೋದು. ಆದ್ರೂ ನನ್ನ ಆಜ್ಞಾಧಾರಕಳಾಗಿ, ಅನುರಕ್ತಳಾಗಿ ಜೊತೆಗಿದ್ಲು. ಈಗ ಇಲ್ಲಿ ಅನೇಕ ಹೆಣ್ಣು ಮಕ್ಕಳು ತಮ್ಮ ಮದುವೆ ಮುರಿದಿದ್ದರ ಕಾರಣ ಹೇಳೋದನ್ನ ಕೇಳಿದ್ಮೇಲೆ ನಾನಿವಳಿಗೆ ಸ್ವತಂತ್ರ ಕೊಟ್ಟೇ ಇರ್ಲಿಲ್ವೇನೋ? ಅಥವಾ ಅವಳಿಗೇ ಅಂಥದ್ದೊಂದು ಸ್ವತಂತ್ರ ಬೇಕಿರಲಿಲ್ಲವೇನೋ ಅಂತನ್ನಿಸ್ತಿದೆ. ನಾವು ಸರಿನಾ? ಅಥವಾ ಇವರೆಲ್ಲ ಮಾಡಿದ್ದು ಸರಿನಾ? ಯಾವುದೊಂದೂ ಅರ್ಥ ಆಗ್ತಿಲ್ಲ.

ನಿಮಗೆಲ್ಲಾ ಒಳ್ಳೆದಾಗ್ಲಿ’ ಎಂದು ಆ ವೃದ್ಧ ಹೇಳಿದರೆ, ‘ನಮ್ಮ ಯಜಮಾನ್ರು ಏನೇನು ಹೇಳಿದ್ರೋ ಅದೆಲ್ಲ ಸರಿ. ಒಂದ್ ಹೆಣ್ಣಿಗೆ ಒಂದ್ ಗಂಡು ಅಂತ ಆ ದೇವ್ರು ಮಾಡಿರ್ತಾನೆ. ಮದ್ವೆ ಆದ್ಮೇಲೆ ಕಷ್ಟಾನೋ ಸುಖಾನೋ ಹೊಂದಿಕೊಂಡ್ ಹೋಗ್ಬೇಕು. ಗಂಡನ್ ಬಿಟ್ಬೋಳು ಅಂತ ಹೇಳಿಸ್ಕೊಂಡ್ ಇರೋಕಾಗುತ್ತಾ? ಸಮಾಜ ಏನನ್ನುತ್ತೆ? ಓದ್ತಿವಿ ಅಂತಾ ಮದುವೆ ಮುರ್ಕೊಳ್ಳೊದ್ನ ಕಲಿಯೋಕಾ ಸ್ಕೂಲು ಕಾಲೇಜಿಗೋಗೋದು? ಏನೇ ಬಂದ್ರೂ ಹೊಂದಾಣಿಕೆ ಮಾಡ್ಕೊಂಡು ಹೋಗ್ಬೇಕು. ನಮ್ ಹಣೆಬರಹದಲ್ಲಿ ಏನ್ ಬರ್ದಿರುತ್ತೋ ಅದಾಗುತ್ತೆ ಅಷ್ಟೇ’ ಎಂದು ಆ ವೃದ್ಧೆ ಹೇಳುತ್ತಲೇ ಇಬ್ಬರೂ ಅದೃಶ್ಯರಾದರು. ಮೊದಲೇ ಕಂಗಾಲಾಗಿ ಹೋಗಿದ್ದ ಸಹನಾ ಮತ್ತು ಸಮರ್ಥ್‌ಗೆ ಇವರಿಬ್ಬರ ಮಾತು ಧೈರ್ಯ ತುಂಬುವ ಬದಲು ಗೊಂದಲಕ್ಕೀಡುಮಾಡಿತು.

***

‘**This is a stereotype Samarth.** ಆ ಅಜ್ಜಿ ಹೇಳೋದ್ ಕೇಳಿದ್ಯಾ? ನಂಗೇನೋ ಆ ಅಜ್ಜಿದು ಹೊಂದಾಣಿಕೆ ಅನ್ನಿಸ್ತಿಲ್ಲ. ಪ್ರಶ್ನೆ ಮಾಡೋಕಾಗದೆ, ಸ್ವತಂತ್ರ ಇಲ್ಲದೆ ಸೋಷಿಯಲ್ ಪ್ರೆಷರ್‌ಗಾಗಿ ಸಹಿಸಿಕೊಂಡು ಇಡೀ ಜೀವನ ತಳ್ಳಿದೆ ಅನ್ನಿಸ್ತಿದೆ. **What do you say of all these?**’ ಎಂದಳು ಸಹನಾ.

‘ನಂಗೆ ಏನ್ ಹೇಳ್ಬೇಕು ಅಂತ ಗೊತ್ತಾಗ್ತಿಲ್ಲ ಸಹನಾ. ನಾನು ಕುವೆಂಪು ಅವರ ಆ ಸಾಲುಗಳನ್ನ ನಮ್ಮ ಮದುವೆ ಕಾರ್ಡ್‌ಗೆ ಆಯ್ಕೆ ಮಾಡಿದ್ದೇ ನಾವಿಬ್ಬರೂ ಆ ಥರ ಬದುಕಬೇಕು ಅನ್ನೋ ಆಸೆಯಿಂದ. ಆದ್ರೆ ಈ ಸ್ಮಶಾನದಲ್ಲಿ ಮುರಿದುಬಿದ್ದ ಮದುವೆಗಳ ಮಾತುಗಳನ್ನು ಕೇಳಿದ್ಮೇಲೆ, ನಾವು ನಿಜಕ್ಕೂ ಆ ಥರ ಬದುಕೋಕಾಗುತ್ತಾ ಅಂತಭಯ ಪಡ್ತಿದಿನಿ. ಅವರೆಲ್ಲರ ಕಾರಣಗಳು ನಮ್ಮ ಕಾರಣಗಳೂ ಆಗಬಹುದಲ್ಲವಾ? ಅಕಸ್ಮಾತ್ ಆಗಿಬಿಟ್ರೆ?’ ಎಂದು ಸಮರ್ಥ್ ತನ್ನ ಕಳವಳ ವ್ಯಕ್ತಪಡಿಸಿದ.

‘ಓಹ್, ನಿಂಗೆ ಆ ಭಯಾನಾ? ನಂಗೆ ಆ ಥರ ಏನನ್ನಿಸ್ತಿಲ್ಲ. ಆದ್ರೆ ನಿಂಗೆ ಆ ಭಯ ಇದೆ ಅಂದ್ರೆ ನೀನು ಅವರುಗಳಲ್ಲಿ ಯಾರಲ್ಲೋ ನಿನ್ನನ್ನ ಮತ್ತೆ ನನ್ನನ್ನ ಕಲ್ಪಿಸಿಕೊಂಡಿದಿಯಾ ಅನ್ಸುತ್ತೆ. ರಸ್ತೆಲಿ ಪ್ರತಿದಿನ ಅಪಘಾತಗಳು ಆಗ್ತಾನೆ ಇರ್ತಾವೆ. ಹಾಗಂತ ವೆಹಿಕಲ್ ಕೊಳ್ಳೋರು ಮತ್ತೆ ಡ್ರೈವಿಂಗ್ ಕಲಿಯೋರು ನಿಲ್ಲಿಬಿಡ್ತಾರಾ? ಹಾಗೇನೇ ಇದು’ ಎಂದು ಸಹನಾ ಸಮಾಧಾನ ಮಾಡಿದಳು. ಆದರೆ ಅಷ್ಟಕ್ಕೆ ಸಮಾಧಾನವಾಗುವಷ್ಟು ಸಣ್ಣದಾಗಿರಲಿಲ್ಲ ಸಮರ್ಥನ ಗೊಂದಲ. ಅಷ್ಟೊಂದು ಜನ ತಮ್ಮ ಮದುವೆ ಮುರಿದು ಬಿದ್ದಿದ್ದರ ಬಗ್ಗೆ ಹೇಳಿಕೊಂಡ ಮೇಲೆ ಆ ಇಬ್ಬರು ವೃದ್ಧರ ಯಶಸ್ವಿ ಮದುವೆ ಅವನಿಗೆ ಅವಾಸ್ತವವೇನೋ ಎಂಬಂತೆ ಭಾಸವಾಗತೊಡಗಿತು. ತನ್ನ ಮದುವೆಯ ಬಗ್ಗೆ ಏನೇನೋ ಕನಸು ಕಂಡಿದ್ದ ಸಮರ್ಥ್ ಮತ್ತು ಸಹನಾರ ಮನಸ್ಸಿನಲ್ಲಿ, ಈ ಸ್ಮಶಾನದಲ್ಲಿ ನಡೆದ ಅಷ್ಟೊಂದು ಮದುವೆಗಳ ಮರಣೋತ್ತರ ಪರೀಕ್ಷೆಗಳು ಉಂಟು ಮಾಡಿದ ಕ್ಷೋಭೆ ಸಣ್ಣ ಮಟ್ಟದ್ದಾಗಿರಲಿಲ್ಲ.

ಅಷ್ಟರಲ್ಲಿ ‘**We are stuck in traffic. It might take another forty five minutes to reach there**’ ಎಂದು ಸಮರ್ಥ್‌ನ ವಾಟ್ಸಪ್‌ಗೆ **We Preserve Memories** ನವರ ಕಡೆಯಿಂದ ಮೆಸೇಜು ಬಂತು. ಅದಕ್ಕೆ, **We shall cancel it today.** ಮತ್ತೆ ಯಾವಾಗ ಮಾಡೋದು ಅಂತ ನಾನೇ ಕಾಲ್ ಮಾಡಿ ತಿಳಸ್ತೀನಿ ಎಂದು ರಿಪ್ಲೈ ಮಾಡಿದ ಸಮರ್ಥ್, ಸಹನಾಳ ಬಳಿ **they have cancelled the photo shoot today.** ಇನ್ನೊಂದ್ ದಿನ ಮಾಡ್ಕೋಣ ಸಹನಾ. ಈಗ ಹೊರಡೋಣ’ ಎಂದು ಅಂಗ ಲಾಚಿದ. ಹಾಗೇ ಆಗಲಿ ಎಂದ ಸಹನಾ, ಆತನಲ್ಲಿದ್ದ ಆತಂಕ, ಅನ್ಯಮನಸ್ಕತೆ, ವೈರಾಗ್ಯ ಭಾವ ವನ್ನು ಗುರುತಿಸಿದರೂ ಸಂದರ್ಭವನ್ನು ತಿಳಿಗೊಳಿಸು ವುದಕ್ಕಾಗಿ, ಕಾಫಿ ಕುಡಿಯೋಣವಾ? ಎಂದಳು. ಸಮರ್ಥ್ ಕೂಡ ಒಪ್ಪಿಗೆ ಸೂಚಿಸಿದ. ಸ್ಮಶಾನ ದಿಂದ ಹೊರ ಬರುವಾಗ ಕಾವಲುಗಾರ, ‘ಡಾಕ್ಯು ಮೆಂಟರಿ ಆಯ್ತಾ ಸರ್?’ ಎಂದದ್ದನ್ನು ಇಬ್ಬರೂ ಕೇಳಿಸಿಕೊಂಡರು ಆದರೆ ಯಾರೂ ಉತ್ತರಿಸಲಿಲ್ಲ.

ಕಾಫಿಕುಡಿಯುತ್ತಿರುವಾಗ, ‘ಇಲ್ಲಿನಡೆದದ್ದನ್ನೆಲ್ಲ ನಾವು ಮನೇಲಿ ಯಾರಿಗೂ ಹೇಳೋದ್ ಬೇಡ ಸಮರ್ಥ್. ಇನ್ನೊಂದಿನ ಮನೆಯವರನ್ನೂ ಕರೆದುಕೊಂಡು ಸಕಲೇಶಪುರದ ಬಳಿ ಒಂದ್ ರೆಸಾರ್ಟ್‌ನಲ್ಲಿ ಉಳಿದುಕೊಂಡು, ಅಲ್ಲೇ ಪ್ರೀವೆಡ್ಡಿಂಗ್ ಫೋಟೊಶೂಟ್ ಮಾಡ್ಕೋಣ ಆಯ್ತಾ?’ ಎಂದಳು ಸಹನಾ. ಇದಕ್ಕೆ ಸಮರ್ಥ್, ಹೌದು ಎಂಬಂತೆಯೂ ಇಲ್ಲ ಎಂಬಂತೆಯೂ ಕಾಣುವ ರೀತಿಯಲ್ಲಿ ತಲೆಯಲ್ಲಾಡಿಸಿದ. ಅದನ್ನು ಅಷ್ಟಾಗಿ ಗಮನಿಸದ ಸಹನಾ, ತನ್ನ ಮೊಬೈಲ್‌ಗೆ ಬಂದ ಒಂದು ಮೀಮ್ ಅನ್ನು ಸಮರ್ಥ್‌ನಿಗೆ ತೋರಿಸಿದಳು. ಹುಡುಗನೊಬ್ಬ ಹೂಗೂಚ್ಛ ಹಿಡಿದು ಲವ್ ಪ್ರಪೋಸ್ ಮಾಡುತ್ತಿದ್ದ ಚಿತ್ರದಲ್ಲಿ ಆ ಹುಡುಗಿ ಹೀಗೆ ಹೇಳುತ್ತಿದ್ದಳು: **If you want relationship with me, bring transfer letter (certificate) from your Ex. I am tired of lies.** ಇದನ್ನು ಜೋರಾಗಿ ಓದಿ, ಸಮರ್ಥ್‌ನ ಭುಜಕ್ಕೆ ಎರಡೆರಡು ಬಾರಿ ಹೊಡೆಯುತ್ತಾ, ಈ ಕಾನ್ಸೆಪ್ಟ್ ಚೆನ್ನಾಗಿದೆ ಅಲ್ವಾ? ಹೊಸ ಹುಡುಗಿ ಬೇಕು ಅಂದ್ರೆ ಹಳೆ ಹುಡುಗಿ ಹತ್ರ **TC** ತಗೊಂಡ್ ಬರಬೇಕು. ಆದ್ರೆ ಸ್ಕೂಲಲ್ಲಿ ಈ **TC** ಜೊತೆ ಕ್ಯಾರೆಕ್ಟರ್ ಸರ್ಟಿಫಿಕೇಟ್ ಅಂತ ಕೊಡ್ತಿದ್ರಲ್ಲ ಅದ್ನೂ ಒಂದ್ ಕೇಳ್ಬೇಕು ನೋಡು ನಮ್ ಹುಡ್ಗೀರು, ಈ ಹುಡುಗರ ಹತ್ರ, ಎಂದು ತಮಾಷೆ ಮಾಡುತ್ತಾ ನಗುತ್ತಲೇ ಇದ್ದಳು. ಸಮರ್ಥ್ ಕೂಡ ಕಾಫಿ ಕುಡಿಯುತ್ತಲೇ ನಕ್ಕಂತೆ ನಟಿಸಿದ. ಇಬ್ಬರೂ ಕ್ಯಾಬ್ ಬುಕ್ ಮಾಡಿಕೊಂಡು ತಂತಮ್ಮ ಮನೆಗೆ ವಾಪಸ್ಸಾದರು. ‘**I reached**’ ಎಂದು ಸಹನಾ ಮೆಸೇಜ್ ಮಾಡಿದಳು. ‘**I too**’ ಎಂಬ ಸಮರ್ಥ್‌ನ ರಿಪ್ಲೈನಲ್ಲಿ ‘ಚಿನ್ನೂ’ ಎಂಬ ಎರಡೂವರೆ ಅಕ್ಷರದ ಒಂದು ಪದ ಮಾಯವಾಗಿತ್ತು. ಸಹನಾ ಮತ್ತೆ ಮತ್ತೆ ಆ ಮೆಸೇಜನ್ನು ರಾತ್ರಿಯಿಡೀ ನೋಡಿದಳು.

***



ಸ್ಮಶಾನದಲ್ಲಿನ ಪ್ರೀವೆಡ್ಡಿಂಗ್ ಫೋಟೊಶೂಟ್ ಐಡಿಯಾದಿಂದಾಗಿ ಸಮರ್ಥ್ ಒಬ್ಬ **misogamist** ಅಂದರೆ ವಿವಾಹದ್ವೇಷಿಯಾಗಿ ಬದಲಾಗಿದ್ದ. ಮುರಿದು ಬಿದ್ದ ಮದುವೆಗಳ ಮರಣೋತ್ತರ ಪರೀಕ್ಷೆಯ ವರದಿಯಿಂದಾಗಿ ಸಹನಾ ಮತ್ತು ಸಮರ್ಥ್ ಮದುವೆ ಘಟಿಸುವ ಮೊದಲೇ ಮುರಿದು ಬಿತ್ತು. ತಾನು **Wax** ಎಂಬ ಫೋನ್ ನಂಬರಿನ ಬಗ್ಗೆ ವಿಚಾರಿಸಿದ್ದೇ ಇದಕ್ಕೆ ಕಾರಣ ಎಂದು ಸಹನಾ ಭಾವಿಸಿಕೊಂಡು ಆ ಬಗ್ಗೆ ನಿರಾಳವಾಗಿದ್ದರೆ, ಸಮರ್ಥನಿಗೆ ಮದುವೆ ಮುರಿದು ಬಿದ್ದ ಕಾರಣಕ್ಕಿಂತ ಅದರಿಂದ ಪಾರಾದೆನೇನೋ ಎಂಬ ಸಮಾಧಾನದ ಭಾವ ಮಾತ್ರ ಉಳಿದಿದೆ. ಅವರಿಬ್ಬರ ಫೋಟೊಗಳನ್ನು ಹಿಡಿದ ಮ್ಯಾರೇಜ್ ಬ್ರೋಕರ್‌ಗಳು ಹೊಸ ಸಂಬಂಧ ಬೆಸೆಯುವ ಪ್ರಾಜೆಕ್ಟ್‌ನಲ್ಲಿ ನಿರತರಾಗಿದ್ದಾರೆ.

ಪ್ರತಿಕ್ರಿಯಿಸಿ: **feedback@sudha.co.in**